ಚಾರಣಪ್ರಿಯರ ಸ್ವರ್ಗ

# ಕೂಡ್ಲು ತೀರ್ಥ ಜಲಧಾರೆ



■ ಚಿತ್ರ– ಬರಹ: **ಶಂಕರ್ ಸಾರಡ್ಕ**

**ಕೂ**ಡ್ಲು ತೀರ್ಥ ಒಂದು ಪಿಕ್‌ನಿಕ್ ತಾಣ. ಕರ್ನಾಟಕದಲ್ಲಿ ಅತಿ ಹೆಚ್ಚು ಮಳೆಗೆ ಪ್ರಖ್ಯಾತವಾದ ಆಗುಂಬೆಯಿಂದ 30 ಕಿ.ಮೀ ದೂರದಲ್ಲಿರುವ ಸೋಮೇಶ್ವರ ವನ್ಯಜೀವಿ ಅಭಯಾರಣ್ಯದ ನಡುವೆ ಈ ಜಲಪಾತ ತಾಣವಿದೆ. ಸುಮಾರು 2 ಕಿ. ಮೀ ದೂರಕ್ಕೆ ಮೆಟ್ಟಲು ಏರಬೇಕು. ಕೆಲವೆಡೆ ಮಾತ್ರ ಕಾಂಕ್ರೀಟಿನ ಮೆಟ್ಟಲುಗಳು. ಕಾಡು ಹಾದಿ ತುಂಬ ತಂಪಾದ ನೆರಳಿದೆ. ಮಧ್ಯ ವಯಸ್ಕರಿಗೆ ಒಂದು ಗಂಟೆಯ ಹಾದಿ.

ಸುಮಾರು 300 ಅಡಿ ಎತ್ತರದಿಂದ ಬೀಳುವ ಜಲಧಾರೆ. ತಲೆಯೊಡ್ಡಿ ಕುಣಿದು ಕುಪ್ಪಳಿಸಬಹುದು. ಜಲಧಾರೆ ಮಳೆಯಂತೆ ಪುಟ್ಟ ಹನಿಗಳಾಗಿ ಹರಿದು ಇದರ ಬುಡದಲ್ಲಿ ನಿಂತು ಸ್ನಾನ ಮಾಡುವಾಗ ಸಿಗುವ ಅನಂದ ವರ್ಣನಾತೀತ. ನೆತ್ತಿಯ ಮೇಲೆ ಸುಡು ಬಿಸಿಲಿದ್ದರೂ ತಟ್ಟದ ಕ್ಷಣವದು. ಬೀಳುವ ಜಲಧಾರೆ ಕೆಳಗೆ ನಿಂತಾಗ ನೀರಿನಲ್ಲಿ ಕಾಣುವ ಕಾಮನ ಬಿಲ್ಲು ಭ್ರಮಾಲೋಕಕ್ಕೆ ಕೊಂಡೊಯ್ಯುತ್ತದೆ.

ಸಂಜೆ 4ರ ತನಕ ಇಲ್ಲಿ ಸುತ್ತಾಟಕ್ಕೆ, ವೀಕ್ಷಣೆಗೆ ಅವಕಾಶವಿದೆ. ಪಶ್ಚಿಮ ಘಟ್ಟದಂಚಿನಲ್ಲಿರುವ ನರಸಿಂಹ ಪರ್ವತ ಸಮುದ್ರಮಟ್ಟದಿಂದ ಸುಮಾರು 3784 ಅಡಿ ಎತ್ತರದಲ್ಲಿದೆ. ಋಷ್ಯ ಶೃಂಗರು ಮೆಟ್ಟಿದ ನೆಲ ಎನ್ನುವ ಪ್ರತೀತಿ. ಅಲ್ಲಿಂದ ಪುಟ್ಟ ನೀರಿನ ತೊರೆಯೊಂದು ಪಂಚಮುಖದಲ್ಲಿ ನಿರಂತರವಾಗಿ ಹರಿಯುತ್ತದೆ.

(8ನೇ ಪುಟ ನೋಡಿ)

